**ಸಮುದಾಯದ ನಡುವಿನ ಸಂಬಂಧ ಮತ್ತು ಅದರೊಳಗೆ ಅಂತರ್ಗತ ಆಗಿರೋ ‘ವಿವೇಕ’ದ ಬಗ್ಗೆ ಹೇಳ್ತಾ ಇದ್ದೀರಿ. ನೀವು ಮಾಡ್ತಾ ಇರೋ ಕೆಲಸ ಸಮುದಾಯದ ನಡುವೆ ಕಲೆತು ಬದುಕುವ ನಿಟ್ಟಿನದ್ದು. ಆದರೆ, ನಮ್ಮ ಕಾಲ ಏನಿದೆ ಅದು ‘ಪ್ರತ್ಯೇಕ ಅಸ್ತಿತ್ವ’ ಅಂದ್ರೆ ‘ಇನ್‌ಡಿವಿಜುಯಾಲಿಟಿ’ ಮುಖ್ಯ ಅನ್ನುವಂತದ್ದು. ಈಗ ವ್ಯಕ್ತಿಯು ಸಮುದಾಯದ ಭಾಗ ಆಗಿ ಉಳಿದಿಲ್ಲ. ಇದು ತಪ್ಪು/ಸರಿ ಅನ್ನುವ ಪ್ರಶ್ನೆ ಅಲ್ಲ. ಮನುಷ್ಯರು ತಮ್ಮ ಪ್ರತಿಭೆಯನ್ನ ಹಣಕ್ಕೆ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಸಮಾಜದ ಮನಸ್ಸಿನಲ್ಲಿ ‘ಪ್ರತಿಭೆಯನ್ನು ದುಡ್ಡುಕೊಟ್ಟು ಕೊಂಡುಕೊಳ್ಳಬಹುದು’ ಅನ್ನೋ ಪರಿಸ್ಥಿತಿ ಬೆಳೆದಿದೆ. ಇಂತಹ ಹೊತ್ತಲ್ಲಿ, ವ್ಯಕ್ತಿಯಾದವನು ಒಂದು ಸಮುದಾಯದ ಅಂಗವಾಗಿ ಇದ್ದುಕೊಂಡೇ ವೈಯಕ್ತಿಕ ಬೆಳವಣಿಗೆ, ಸಾಧನೆ ಮಾಡಬಹುದು ಅನ್ನಿಸುತ್ತ?**

ನಿಮ್ಮ ಪ್ರಶ್ನೆಯಿಂದನೇ ನನ್ನೊಳಗೆ ಹಲವಾರು ಪ್ರಶ್ನೆಗಳು ಹುಟ್ಕೊಳ್ತಾ ಇದಾವ... ‘ಫಾರ್ಮ್’ ಅನ್ನೋದು ಸಮುದಾಯದ ಪ್ರತಿಫಲಾನೋ, ಆಲೋಚನೇನೊ, ರೀತೀನೋ ಆಗ್ಯದ. ಇದು ಒಂದು ರಿಚುವಲ್ ಆಗಿ, ಡ್ಯಾನ್ಸ್ ಆಗಿ, ಹಾಡಾಗಿ ತನ್ನನ್ನ ತೋರಿಸ್ಕೊತದ. ಈಗ, ಮಾರ್ಕೆಟ್ ಅನ್ನಾದು ನಮ್ ಬದುಕಿನ್ಯಾಗ ಬಂದುಬಿಟ್ಟ್ಯಾದ. ಒಂದು ಹಂತದಾಗ ಎಲ್ಲವ್ರೂ ‘ಪ್ರಾಡಕ್ಟ್’ ಅಂತ ಏನ ಕರಿತೀವಿ ಹಂಗಾಗ್ಯಾದ. ಈಗ ರೇಸ್ ಹ್ಯಾಂಗ್ ಶುರುವಾಗ್ಯದ ಅಂದ್ರ, ಯಾರು ಯಾವುದನ್ನಾರು ಹ್ಯಾಂಗ ಪ್ರಾಡಕ್ಟ್ ಮಾಡ್ಕೊತರ ಅನ್ನಾದು ಮುಖ್ಯ. ಈ ಮಾಧ್ಯಮದಾಗ ಒಬ್ಬ ಕಲಾವಿದರಾಗಿ ನೀವು ಏನಾಗ್ತಿರಿ, ಯಾರಾಗ್ತಿರಿ... ಅಂದ್ರೆ, ನೀನು ಬರೀ ‘ಕಲೆ’ನ ಬಳಸೋವ್ರಾಗ್ತೀರಾ? ಅಥವಾ ಬಳಸಿದ್ದಕ್ಕೆ ಮನ್ನಣೆ ಕೊಡವ್ರಾಗ್ತೀರ? ಅಥವ ದಲ್ಲಾಳಿಗಳ ತರ ‘ಕಲೆ’ನ ಉಪಯೋಗಿಸ್ತೀರೋ? ಅನ್ನಾದು ಮುಖ್ಯ. ನನ್ನದೇ ಒಂದು ವಿಷಯ ಹೇಳ್ತೀನಿ. ನಾನು ಸಂಗ್ರಹ ಮಾಡಿದ ಕೆಲವೊಂದು ಹಾಡ್ಗೊಳ್ನ ಬಳಸ್ಲಕ್ಕ ಅಂತ ಕೆಲವ್ರಿಗಿ ಕೊಟ್ಟೆನಿ. ಆದ್ರೆ ನಂಗೆ ಆಮೇಲೆ ಏನರ್ಥ ಆಯ್ತು ಅಂದ್ರ, ಅದ್ನ ಕೊಡ್ಲಾಕ ಅದು ನಂದಾಗಿರ್ಲಿಲ್ಲ ಅಂತ. ಇದಕ್ಕ ನನ್ನತ್ರ ತಕ್ಷಣಕ್ಕಂತ



ಶಿಲ್ಪಾ ಅವರೊಂದಿಗೆ ಸಂದರ್ಶಕಿ

ಪರಿಹಾರ ಇಲ್ಲ. ಒಂದು ದೊಡ್ಡ ಕಮ್ಯುನಿಟಿಗಿ ನ್ಯಾಯ ಕೊಡಸೋ ದೃಷ್ಟಿನಾಗ ನಾ ಮಾಡಿದ್ದು ಸರಿ ಅಂತ ನಂಗನ್ನಿಸಲ್ಲ. ಆದ್ರೆ, ಹಾಂಗ ನೋಡಿದಾಗ, ದೇವದಾಸಿರ ‘ಫಾರ್ಮ್’ ಏನದ ಅದನ್ನ ಆ ಹೆಣ್ಣುಮಕ್ಕಳು ಈ ಮಾಧ್ಯಮದ ಮೂಲಕ ಇಂಗ್ಲಿಷ್ ಬಳಸ್ಕೊಂಡು, ಈ ಪ್ರೇಕ್ಷಕರನ್ನ, ಜನರನ್ನ ತಲುಪೋದು ಸಾಧ್ಯಾನೇ ಇಲ್ಲ. ಹೀಗಾದಾಗ, ಕರ್ತವ್ಯ ಆಗಿ ನಾನಿದ್ನ ಮಾಡ್ಲೇಬೇಕು ಅಂತಾನು ಅನ್ನಿಸ್ತದ. ನಾ ಹೇಳೋದಿಷ್ಟೆ, ಯಾರಾದ್ರೂ ಈ ಹಾಡ್ಗೊಳ್ನ ಬಳಸ್ದಾಗ ನಾವು ಎಷ್ಟು ಜವಾಬ್ದಾರಿಯಿಂದ ನಮ್ಮ ಅಧಿಕಾರನ ಬಿಟ್ಟುಕೊಟ್ಟು ನಾವು ಎಲ್ಲಿಂದ ಇದನ್ನ ತಗೊಂಡ್ವಿ, ಬಳಸಿದ್ವಿ ಅಂತ ಲೋಕಕ್ಕ ಹೇಳಾದು ಮುಖ್ಯ. ಈ ವಿಷ್ಯದಾಗ ನಾವು ಎಷ್ಟು ಜವಾಬ್ದಾರಿ ತಗೊತಿವಿ, ಜಾಗ್ರತೆಲಿ ನಡ್ಕೋತೀವಿ ಅನ್ನಾದು ಬಹಳ ಮುಖ್ಯ...

ಭೇದಭಾವ ಇರಬಾರ್ದು ಅನ್ನಾದು ಸರಿ, ಆದ್ರೆ ಜಾತಿ ಇರಬಾರ್ದು ಅಂತಂದ್ರೆ ಇತಿಹಾಸ ಅಳಿಸಿ ಹೋಗ್ಬೇಕು ಅಂತಾತಲ್ಲ? ನಮ್ ದೇಹದಾಗ ಇರೋ ನೆನಪುಗಳು